## ಪತ್ರಿಕಾ ಪ್ರಕಟಣೆ

**31ನೇ ಮೇ 2018 ರಿಂದ 16ನೇ ಜೂನ್ 2018 ರವರೆಗೆ "ವಿಶೇಷ ಮರುಪಾವತಿ ಅಭಿಯಾನದ ಪಾಕ್ಷಿಕ" (Special Refund Fortnight Drive) – ವಾಣಿಜ್ಯ ತೆರಿಗೆಗಳ ಇಲಾಖೆ ವತಿಯಿಂದ ನೀಡಲಾದ ಮರುಪಾವತಿ**

30ನೇ ಏಪ್ರಿಲ್ 2018 ಅಥವಾ ಅದಕ್ಕೂ ಮೊದಲು ಸ್ವೀಕರಿಸಲಾದ ಬಾಕಿ ಇರುವ ಸರಕು ಮತ್ತು ಸೇವಾ ತೆರಿಗೆಯ ಮರುಪಾವತಿ ಅರ್ಜಿಗಳನ್ನು ವಿಲೇವಾರಿ ಮಾಡುವ ಸಲುವಾಗಿ ಒಂದು 'ವಿಶೇಷ ಮರುಪಾವತಿ ಅಭಿಯಾನದ ಪಾಕ್ಷಿಕ' ವನ್ನು 31ನೇ ಮೇ 2018 ರಿಂದ 14ನೇ ಜೂನ್ 2018 ರವರೆಗೆ ಹಮ್ಮಿಕೊಳ್ಳಲಾಗಿದ್ದು, ಅದನ್ನು ನಂತರ 16ನೇ ಜೂನ್ 2018 ರವರೆಗೆ ವಿಸ್ತರಿಸಲಾಯಿತು.

31ನೇ ಮೇ 2018 ರಲ್ಲಿದ್ದಂತೆ, ಕರ್ನಾಟಕ ವಾಣಿಜ್ಯ ತೆರಿಗೆಗಳ ಇಲಾಖೆಯು 30ನೇ ಏಪ್ರಿಲ್ 2018 ಅಥವಾ ಅದಕ್ಕೂ ಮೊದಲು ಸ್ವೀಕರಿಸಲಾದ 392 ಸರಕು ಮತ್ತು ಸೇವಾ ತೆರಿಗೆ ಮರುಪಾವತಿ ಅರ್ಜಿಗಳು ವಿಲೇವಾರಿಗೆ ಬಾಕಿ ಇದ್ದು, ಇವುಗಳು 88.36 ಕೋಟಿ ರೂಪಾಯಿಗಳ ಮರುಪಾವತಿ ಮೊತ್ತವನ್ನು ಒಳಗೊಂಡಿರುತ್ತವೆ.

ಈ ***"ವಿಶೇಷ ಮರುಪಾವತಿ ಅಭಿಯಾನದ ಪಾಕ್ಷಿಕ" (Special Refund Fortnight Drive)*** ದಲ್ಲಿ, ಕರ್ನಾಟಕ ವಾಣಿಜ್ಯ ತೆರಿಗೆಗಳ ಇಲಾಖೆಯು 30ನೇ ಏಪ್ರಿಲ್ 2018 ಅಥವಾ ಅದಕ್ಕೂ ಮೊದಲು ಸ್ವೀಕರಿಸಲಾದ ಹಾಗೂ ಬಾಕಿ ಇರುವ ಎಲ್ಲಾ 392 ಸರಕು ಮತ್ತು ಸೇವಾ ತೆರಿಗೆ ಮರುಪಾವತಿ ಅರ್ಜಿಗಳನ್ನು ವಿಲೇವಾರಿ ಮಾಡಿದ್ದು, 88.36 ಕೋಟಿ ರೂಪಾಯಿಗಳ ಮರುಪಾವತಿ ಮೊತ್ತವನ್ನು ಮಂಜೂರು ಮಾಡಿರುತ್ತದೆ.

ವಾಣಿಜ್ಯ ತೆರಿಗೆಗಳ ಆಯುಕ್ತರು
(ಕರ್ನಾಟಕ), ಬೆಂಗಳೂರು

ವಾಣಿಜ್ಯ ತೆರಿಗೆಗಳ ಆಯುಕ್ತರು
(ಕರ್ನಾಟಕ) ಬೆಂಗಳೂರು